**ಓ ಎಸ್ 87/2024 ಪಿಡಬ್ಲ್ಯೂ2**

**ಸಾಕ್ಷಿಯನ್ನು ದಿಃ 06.04.2026 ರಂದು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.**

**ಪಾಟೀಸವಾಲುಃ 1 ರಿಂದ 5 ನೇ ಪ್ರತಿವಾದಿ ಪರ ಶ್ರೀ ಎನ್ ಎಂ ಜಿ ವಕೀಲರಿಂದಃ**

ನನಗೆ ಓದಲು ಮತ್ತು ಬರೆಯಲು ಬರುವುದಿಲ್ಲ. ನನ್ನ ಮುಖ್ಯವಿಚಾರಣೆಯ ಪ್ರಮಾಣ ಪತ್ರಿಕೆಯ ಸಂಗತಿಗಳನ್ನು ಓದಿ ಹೇಳಿದೆ. ಪ್ರಮಾಣ ಪತ್ರಿಕೆಯನ್ನು ನಾನು ಹೇಳಿ ಬರೆಸಿಲ್ಲ. ಪ್ರಮಾಣ ಪತ್ರಿಕೆಯಲ್ಲಿನ ಸಂಗತಿಗಳನ್ನು ತಿಳಿದುಕೊಂಡು ಸಹಿ ಮಾಡಿದ್ದೇನೆ. ನನ್ನ ಮಗ ಕಿಶೋರ ಬೆಂಗಳೂರಿನಲ್ಲಿ ವಕೀಲರಾಗಿದ್ದಾರೆಂದರೆ ಸರಿ. ವಾದಿಯ ಗಂಡ ಮತ್ತು ನನ್ನ ಮಗ ಸ್ನೇಹಿತರೆಂದರೆ ಸರಿ. ವಾದಿಯು ಗೌಡ ಜಾತಿಗೆ ಸೇರಿದವರಾಗಿರುತ್ತಾರೆ. ಅವರು ಕ್ರಿಶ್ಚಿಯನ್ ರವರನ್ನು ಮದುವೆಯಾಗಿದ್ದಾರೆ. ಅವರ ಮದುವೆಯಾಗಿ 13 ವರ್ಷಗಳಾಗಿದೆ. ಅವರ ಮದುವೆಯು ಮೈಸೂರಿನ ಚರ್ಚ್ ನಲ್ಲಿ ನಡೆದಿದೆ ಎಂದು ಗೊತ್ತು ನಾನು ಹೋಗಿಲ್ಲ.

ವಾದಿಯ ತಾಯಿ ಪಾರ್ವತಿಯವರು ವಾಸ ಮಾಡುತ್ತಿರುವ ಮನೆಯ ಚೆಕ್ಕುಬಂಧಿ ನನಗೆ ಗೊತ್ತಿಲ್ಲ. ವಾದಿಯ ತಾಯಿ ಪಾರ್ವತಿಯವರಿಗೆ ಓದು ಬರಹ ಬರುವುದಿಲ್ಲ. ನಾಗಣ್ಣಾಚಾರಿ ಹೆಂಡತಿ ಪಾರ್ವತಿ ಯಾರೆಂದು ಗೊತ್ತಿಲ್ಲ, ನಾಗಣ್ಣ ಹೆಂಡತಿ ಪಾರ್ವತಿ ಗೊತ್ತು. ಮೇಲು ಕೋಟೆ ನಾಗಣ್ಣನನ್ನು ನಾನು ನೋಡಿದ್ದೇನೆ. ಅವರ ಪೂರ್ತಿ ನಾಮಧೇಯ ಮತ್ತು ಅವರ ತಂದೆತಾಯಿಗೆ ಎಷ್ಟು ಜನ ಮಕ್ಕಳು ಎಂದು ನನಗೆ ಗೊತ್ತಿಲ್ಲ. ಅವರ ಹೆಂಡತಿ ಮಕ್ಕಳ ಹೆಸರು ನನಗೆ ಗೊತ್ತಿಲ್ಲ. ನಾಗಣ್ಣನವರು ಪಾರ್ವತಿಯವರನ್ನು ಈಗ ಇರುವ ಮನೆಯಲ್ಲಿ ಮದುವೆ ಮಾಡಿಕೊಂಡರು. ಎಷ್ಟು ವರ್ಷಗಳ ಹಿಂದೆ ಮದುವೆ ಮಾಡಿಕೊಂಡು ನನಗೆ ಗೊತ್ತಿಲ್ಲ. ಆ ಮದುವೆಗೆ ನಾನಾಗಲೀ ಇತರೆ ಯಾರ್ಯಾರು ಸೇರಿದ್ದರು ಎಂದು ನನಗೆ ಮಾಹಿತಿ ಇಲ್ಲ. ಮನೆಗೆ ವಿದ್ಯುತ್ ಸಂಪರ್ಕ ಪಡೆದುಕೊಳ್ಳುವಾಗ ನಾಗಣ್ಣಾಚಾರಿ ಹೆಂಡತಿ ಪಾರ್ವತಿ ಎಂದು ಹೇಳಿ ಸಂಪರ್ಕ ಪಡೆದುಕೊಂಡಿದ್ದಾರೆಂದು ನನಗೆ ಗೊತ್ತಿಲ್ಲ. ನಾಗಣ್ಣನವರು ಆ ಮನೆಯ ಖಾಲಿ ಜಾಗವನ್ನು ಯಾವಾಗ ಕ್ರಯಕ್ಕೆ ಪಡೆದುಕೊಂಡರು ನನಗೆ ಗೊತ್ತಿಲ್ಲ. ಆ ಖಾಲಿ ಜಾಗದಲ್ಲಿ ನಾಗಣ್ಣ ನವರು ಒಂದು ಸಣ್ಣ ಮನೆಯನ್ನು ನಿರ್ಮಾಣ ಮಾಡಿದರು ಎಂದರೆ ಸರಿ.ನಾಗಣ್ಣ

ನವರು ಮನೆ ಕಟ್ಟಲು ಬಂದು ಪಾರ್ವತಿ ರವರ ತಾಯಿ ಮನೆಯಲ್ಲಿ ಬಾಡಿಗೆಗೆ ಇದ್ದರು. ಸ್ವಲ್ಪ ದಿನಗಳ ಕಾಲ ಬಾಡಿಗೆಗೆ ಇದ್ದು, ಆಮೇಲೆ ಮನೆ ಕಟ್ಟಿಕೊಂಡು ಬಂದರು. ಪಾರ್ವತಿಯ ತಾಯಿಯ ಮನೆಯ ಚೆಕ್ಕುಬಂಧಿ ನನಗೆ ಗೊತ್ತಿಲ್ಲ. ಪಾರ್ವತಿಯ ತಂದೆ ತಾಯಿ ಹೆಸರು ಪಾಪೇಗೌಡ ಮತ್ತು ಶಿವಮ್ಮ. ನಾಗಣ್ಣ ಹಾಗೂ ಪಾರ್ವತಿ ಗಂಡ ಹೆಂಡತಿಯರಾಗಿ ವಾಸ ಮಾಡುತ್ತಿದ್ದ ಬಗ್ಗೆ ಪಡಿತರ ಚೀಟಿ ಇದೆ. ನಿಶಾನೆ ಪಿ –11 ಹಾಗೂ 13 ರ ದಾಖಲೆಗಳಲ್ಲಿರುವ ಮಹಿಳೆಯು ಪಾರ್ವತಿ ಎಂದರೆ ಸರಿ. ನಿಶಾನೆ ಪಿ–13 ರಲ್ಲಿರುವ ಪಡಿತರ ಚೀಟಿಗಳಲ್ಲಿ ನಾಗಣ್ಣ ಪೋಟೋ ಮತ್ತು ಹೆಸರು ಇಲ್ಲ. ಆಧಾರ್ ಕಾರ್ಡ್ ನಲ್ಲಿ ಪಾರ್ವತಿಯನ್ನು ಎಂ.ವಿ ನಾಗಣ್ಣನ ಹೆಂಡತಿ ಎಂದು ಬರೆಸಿದ್ದಾರೋ ಇಲ್ಲೋ ನನಗೆ ಗೊತ್ತಿಲ್ಲ. ನಾಗಣ್ಣ ಹಾಗೂ ಪಾರ್ವತಿ ಮತ್ತು ವಾದಿಯು ಒಟ್ಟಿಗೆ ಇರುವ ಪೋಟೋ ಮತ್ತು ಅವರ ಸಂಬಂಧಗಳನ್ನು ರುಜುವಾತುಪಡಿಸುವ ದಾಖಲೆಗಳನ್ನು ನಾನು ನೋಡಿಲ್ಲ. ನಾಗಣ್ಣನ ಮತ್ತೊಬ್ಬ ಹೆಂಡತಿಯ ವಿರುದ್ಧ ಕೇಸು ಹಾಕಲಾಗಿದೆ ಎಂದು ವಾದಿ ಹೇಳಿದ್ದಾರೆ. ಎಂ.ವಿ ನಾಗಣ್ಣನಿಗೆ ಒಬ್ಬಳೇ ಹೆಂಡತಿ ಮತ್ತು ಮಕ್ಕಳು ಇದ್ದು, ವಾದಿಗೂ ಮತ್ತು ನಾಗಣ್ಣನಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ.

ವಾದಿಯೂ ತನ್ನ ಗಂಡನ ಮನೆಯಲ್ಲಿ ವಾಸ ಇದ್ದಾಳೆ. ಪಾಂಡವಪುರದ ಜವರೇಗೌಡರ ಮನೆಯಲ್ಲಿ ವಾಸ ಇದ್ದಾರೆ.

**ಪಾಟೀಸವಾಲು 8 ನೇ ಪ್ರತಿವಾದಿ ಪರ ಶ್ರೀ ಎಂ ಎಸ್ ಪಿ ವಕೀಲರಿಂದಃ**

**1 ರಿಂದ 5 ಪ್ರತಿವಾದಿಗಳ ಪರ ವಕೀಲರ ಪಾಟೀಸವಾಲನ್ನು ಅಳವಡಿಸಿಕೊಂಡು ಮುಂದುವರಿದ ಪಾಟೀಸವಾಲುಃ**

11 ನೇ ವಾರ್ಡ್ ಶಾಂತಿನಗರದಲ್ಲಿ ವಾಸ ಇದ್ದೇನೆ. ನನ್ನ ಮುಖ್ಯವಿಚಾರಣೆಯ ಪ್ರಮಾಣಪತ್ರಿಕೆ ಬರೆಸುವಾಗ ಈ ಸಂಗತಿಯನ್ನು ನಾನು ಹೇಳಿಲ್ಲ. ನನ್ನ ತವರೂರು ಪಾಂಡವಪುರ. ಎಂ.ವಿ.ನಾಗಣ್ಣ ನವರ ತಂದೆತಾಯಿಯ ಹೆಸರು ನನಗಗೊತ್ತಿಲ್ಲ. ವಾದಿ ಮತ್ತು ವಾದಿಯ ತಾಯಿ ವಾಸ ಇರುವ ಮನೆಯ ಖಾಲಿ ಜಾಗವನ್ನು ನಾಗಣ್ಣನವರು ಯಾರಿಂದ ಮತ್ತು ಯಾವಾಗ ಖರೀದಿ ಮಾಡಿದ್ದರು ಎಂದು ನನಗೆ ಗೊತ್ತಿಲ್ಲ. ಆ ಖಾಲಿ

ನಿವೇಶನ ವಿಸ್ತೀರ್ಣ ಎಷ್ಟು ಇತ್ತು ಎಂದು ನನಗೇ ಗೊತ್ತಿಲ್ಲ. ನಾಗಣ್ಣ ನವರ ಕ್ರಯಪತ್ರಕ್ಕೆ ನಾನು ಸಾಕ್ಷಿಯಾಗಿ ಸಹಿ ಮಾಡಿಲ್ಲ. ನಾಗಣ್ಣ ನವರು ಪಾರ್ವತಿಯವರನ್ನು ಯಾವ ದಿನಾಂಕದಂದು ಮದುವೆ ಯಾದರು ನನಗೆ ಗೊತ್ತಿಲ್ಲ. ಈ ವಾಸ ಇರುವ ಶಾಂತಿನಗರದ ಮನೆಯಲ್ಲಿಯೇ ನಾಗಣ್ಣ ಮತ್ತು ಪಾರ್ವತಿಯ ಮದುವೆ ಮಾಡಿದ್ದಾರೆ. ಆ ಮದುವೆ ಕಾರ್ಯಕ್ರಮದಲ್ಲಿ ನಾನು ಭಾಗವಹಿಸಿಲ್ಲ. ಆ ಮದುವೆ ಆದ ಸಂಬಂಧ ಪೋಟೋಗಳನ್ನು ನಾನು ನೋಡಿಲ್ಲ. ವಾದಿಯು ಜನವರಿ 5 ಕ್ಕೆ ಹುಟ್ಟಿದ್ದಾರೆ ಇಸವಿ ಗೊತ್ತಿಲ್ಲ. ಎಂ.ವಿ. ನಾಗಣ್ಣನವರು ಪಾರ್ವತಿಯ ಗಂಡನಾಗಲೀ ವಾದಿಯ ತಂದೆಯಾಗಲೀ ಅಲ್ಲ ಅಂದರೆ ಸರಿಯಲ್ಲ. ಎಂ.ವಿ. ನಾಗಣ್ಣನವರಿಗೆ ಕಮಲಮ್ಮ ಎಂಬುವವರು ಹೆಂಡತಿ ಮತ್ತು 4 ಜನ ಮಕ್ಕಳು ಎಂದರೆ ನನಗೆ ಗೊತ್ತಿಲ್ಲ. ಎಂ.ವಿ. ನಾಗಣ್ಣನವರು ಮೇಲುಕೋಟೆಯವರು ಎಂದರೆ ಸರಿ. ಎಂ.ವಿ. ನಾಗಣ್ಣನವರ ಕುಟುಂಬದ ಬಗ್ಗೆ ಕಂದಾಯ ಇಲಾಖೆಯವರು ವಂಶವೃಕ್ಷ ನೀಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಎಂ.ವಿ. ನಾಗಣ್ಣನವರಿಗೆ ಕಮಲಮ್ಮ ಎಂಬುವವರು ಹೆಂಡತಿ ಮತ್ತು ಸುಕನ್ಯ, ಧರ್ಮಕುಮಾರಿ, ಲಾವಣ್ಯ ಹಾಗೂ ಪವನ್ ಗೌಡ ಮಾತ್ರ ಮಕ್ಕಳು ಎಂದರೆ, ಕಂದಾಯ ಇಲಾಖೆಯವರು ವಂಶವೃಕ್ಷ ಪ್ರಮಾಣಪತ್ರ ನೀಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಆ ಮಾಹಿತಿ ನನಗೆ ಇದೆ ಎಂದರೆ ಸರಿಯಲ್ಲ. ಪಾರ್ವತಿ ಹಾಗೂ ವಾದಿಯ ಚಿತಾವಣೆಯ ಮೇರೆಗೆ ನಾನು ನ್ಯಾಯಾಲಯದಲ್ಲಿ ವಾದಿಯ ಪರವಾಗಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**ಪಾಟೀಸವಾಲುಃ 6 ನೇ ಪ್ರತಿವಾದಿ ಪರ ಯಾವುದೇ ಕೋರಿಕೆ ಇಲ್ಲದಿರುವ ಕಾರಣ ಪಾಟೀಸವಾಲು ಏನು ಇಲ್ಲ ಎಂದು ತೆಗೆದುಕೊಳ್ಳಲಾಯಿತು.**

**(ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಿಸಿದೆ)**

**ಸಾ ಓ ಹೇ ಸ ಒ**

**(ಬಾಬು ಎನ್)**

**1 ನೇ ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು,**

**ಪಾಂಡವಪುರ**